



ಪುಸ್ತಕ ಪರಿಚಯ

# ವಿವೇಕ–ಸುಖಾನಂದ ವರ್ಧಕ ಭಾಷ್ಯ

ಡಾ. ಪ್ರಸನ್ನಾಕ್ಷಿ

**'ವಿವೇಕಸುಖವರ್ಧಿನೀ' ಸಂಸ್ಕೃತ ವ್ಯಾಖ್ಯಾಸಹಿತಾ 'ಈಶಾವಾಸ್ಯೋಪನಿಷತ್'**
**ಲೇಖಕರು: ಸ್ವಾಮಿ ಹರ್ಷಾನಂದ, ಪ್ರಕಾಶಕರು: ಶ್ರೀ ನಿತ್ಯಾನಂದ ಪ್ರಕಾಶನ, ಬೆಂಗಳೂರು ;**
**ಪುಟಗಳು : ೮೬ ; ಬೆಲೆ: ರೂ. ೩೦/–**

**ಭಾ**ರತದ ಜನಜೀವನದ ಎಲ್ಲಾ ಆಚಾರವಿಚಾರಗಳ ಹಿನ್ನೆಲೆಯಲ್ಲಿ ಹರಿಯುತ್ತಿರುವುದು ವೇದ. ಇವುಗಳ ಉತ್ತರಭಾಗ ಉಪನಿಷತ್. ಭಾರತದಲ್ಲಿ ವ್ಯವಹಾರದಲ್ಲಿರುವ ಎಲ್ಲಾ ದರ್ಶನಗಳಿಗೂ ಸ್ಫೂರ್ತಿಯ ಸೆಲೆ ಈ ಉಪನಿಷತ್ತುಗಳು. ಇವು ವೇದಗಳ ಕೊನೆಯ ಭಾಗವಾದುದರಿಂದ ಇವಕ್ಕೆ 'ವೇದಾಂತ' ಎಂಬ ಹೆಸರೂ ಇದೆ. ಇವು ಪ್ರಧಾನವಾಗಿ ಹತ್ತು. ಅವುಗಳಲ್ಲಿ 'ಈಶಾವಾಸ್ಯ' ಕೇವಲ ಹದಿನೆಂಟೇ ಮಂತ್ರಗಳುಳ್ಳ ಅತ್ಯಂತ ಪುಟ್ಟ ಉಪನಿಷತ್ತು. ಇತರ ಉಪನಿಷತ್ತುಗಳಂತೆ, **ಚಿತ್, ಅಚಿತ್, ಈಶ್ವರ** – ಇವುಗಳಲ್ಲಿ ವ್ಯಾಪಿಸಿರುವ ಪರತತ್ತ್ವದ ವಿಚಾರ, ಇಂದ್ರಿಯಗಳ ಸುಖಭೋಗದ ಸೆಳೆತ, ಜೀವಿಯ ಬದ್ಧಸ್ಥಿತಿ, ಅದರ ಮುಕ್ತಿಯ ದಾರಿ ಮುಂತಾದ ಹಲವು ವಿಷಯಗಳನ್ನು ಈ ಉಪನಿಷತ್ ಕೂಡ ವಿಮರ್ಶಿಸುತ್ತದೆ.

ಎಲ್ಲ ಆಚಾರ್ಯರೂ ಪ್ರಸ್ಥಾನತ್ರಯಗಳಾದ ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆಗಳಿಗೆ ಭಾಷ್ಯವನ್ನು ರಚಿಸಿದ್ದಾರೆ; ಆ ಮೂಲಕ ತಮ್ಮ ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ. ಪರಮಪೂಜ್ಯ ಸ್ವಾಮಿ ಹರ್ಷಾನಂದಜಿಯವರು ಶ್ರೀರಾಮಕೃಷ್ಣರು ಪ್ರಾಯೋಗಿಕವಾಗಿ ಅನುಭವಿಸಿದ 'ಸರ್ವಮತ–ಸಮನ್ವಯ' – 'ಎಲ್ಲಾ ಮತಗಳೂ ಭಗವಂತನ ಕಡೆ ಹೋಗುವುದಕ್ಕೆ ದಾರಿಗಳು, ಅವುಗಳ ಗುರಿ ಮತ್ತು ನೆಲೆ ಒಂದೇ' ಎಂಬ ಸಿದ್ಧಾಂತವನ್ನು ಈ ಉಪನಿಷತ್ತಿನ ಭಾಷ್ಯದಲ್ಲಿ ಸ್ಪಷ್ಟವಾಗಿ ನಿರೂಪಿಸಿದ್ದಾರೆ. ಈ ಮೂಲಕ ಅವರ ಭಾಷ್ಯವು ಈಶಾವಾಸ್ಯ ಉಪನಿಷತ್ತನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಾಧಕವಾಗಿದೆ; ಸಾಧಕನ ವಿವೇಕವನ್ನೂ, ಆನಂದವನ್ನೂ(ಸುಖ) ವರ್ಧಿಸುವ ಅಪೂರ್ವ ಸೆಲೆಯೂ ಆಗಿದೆ.

ಈ ಭಾಷ್ಯವು ಎಲ್ಲಾ ಶಾಸ್ತ್ರಗ್ರಂಥಗಳಂತೆ ಮಂಗಳಾಚರಣೆಯಿಂದ ಪ್ರಾರಂಭವಾಗಿದೆ:

**ಈಶಾವಾಸ್ಯಮಿದಂ ಯದಸ್ತಿ ಸಕಲಂ ಹ್ಯೇವೇತಿ ವೇದೈಸ್ತುತಂ**
**ಯಸ್ಯೈಶಸ್ಯ ನರಃ ಸ್ವಕರ್ಮ ಸಫಲಂ ಕುರ್ವೀತ ಪಾದೇಽರ್ಪಣಂ ।**
**ಯಂ ದೃಷ್ಟ್ವಾಽಽತ್ಮನಿ ಭೂತಜಾತಹೃದಯೇ ಮೋಹೋ ನ ಶೋಕೋಽಸ್ತಿವಾ**
**ಯಶ್ಚೈನಸ್ಸತತಂ ಗದಾಧರಮಹಂ ಯೋಽಯೋತಿ ಮತ್ ತಂ ಭಜೇ ॥**

ಈ ಸಮಸ್ತ ಪ್ರಪಂಚದಲ್ಲಿ ಭಗವಂತನು ಒಳಗೆ ಹೊರಗೆ ಎಲ್ಲೆಲ್ಲೂ ತುಂಬಿದ್ದಾನೆ. ಆದುದರಿಂದ ಜೀವಿಯು ತಾನು ಮಾಡುವ ಎಲ್ಲ ಕೆಲಸಗಳನ್ನೂ ಅವನಿಗೇ ಸಮರ್ಪಿಸಬೇಕು. ಹೀಗೆ ಭಗವದರ್ಪಿತವಾಗಿ ಕೆಲಸ ಮಾಡುತ್ತಾ ಒಬ್ಬನು ತನ್ನ ಪೂರ್ಣ ಬದುಕನ್ನು ಬಾಳಿ ಜೀವಿಸಬೇಕು. ಅದರೊಂದಿಗೆ ಎಲ್ಲದರ ಒಳಗೂ ಇರುವ ಈಶನನ್ನು ಅನುಭವಕ್ಕೆ ತಂದುಕೊಳ್ಳಬೇಕು. ಆಗ ಶೋಕ ಮೋಹಗಳು ಕಾಡುವುದಿಲ್ಲ. ಇದೇ ಈ ಉಪನಿಷತ್ತಿನ ತತ್ತ್ವ. ಅಂತಹ ಪರಿಪೂರ್ಣ ನೋಟವನ್ನು ಕರುಣಿಸು ಎಂದು ಶ್ಲೋಕದ ಕಡೆಯಲ್ಲಿ ಭಗವಂತನನ್ನು ಬೇಡಲಾಗಿದೆ. ಹೀಗೆ ಇಡೀ ಈಶಾವಾಸ್ಯ ಉಪನಿಷತ್ತಿನ ಸಾರವು ಚಿತ್ತಾಕರ್ಷಕವಾಗಿ ಪರಿಪೂರ್ಣವಾಗಿ ಈ ಒಂದೇ ಶ್ಲೋಕದಲ್ಲಿ ನಿರೂಪಿತವಾಗಿದೆ.

ಮೇಲುನೋಟಕ್ಕೆ ಭಗವಂತನನ್ನು ಭಜಿಸುತ್ತಿರುವ ಒಂದು ಶ್ಲೋಕವಾಗಿ ಇದು ಕಂಡುಬಂದರೂ, ಈಶಾವಾಸ್ಯ ಉಪನಿಷತ್ತು ಪ್ರತಿಪಾದಿಸುವ ಎಲ್ಲ ಪ್ರಮುಖ ಅಂಶಗಳೂ ಇಲ್ಲಿ ಯುಕ್ತಿಯುಕ್ತವಾಗಿ ನಿರ್ದೇಶಿತವಾಗಿವೆ. ಆದುದರಿಂದ ಇದು ವಸ್ತುನಿರ್ದೇಶಾತ್ಮಕ ಮಂಗಳವೂ ಆಗಿದೆ. ಪರಮಪೂಜ್ಯ ಸ್ವಾಮೀಜಿಯವರ ಭಾಷ್ಯದ ಮನೋಹರತೆಗೆ ಇದೊಂದು ಅಪೂರ್ವ ನಿದರ್ಶನ. ಇದು ಸ್ವಾಮೀಜಿಯವರ ಪ್ರತಿಭೆ, ಪಾಂಡಿತ್ಯ ಮತ್ತು ಜ್ಞಾನಾನುಭವಗಳಿಗೆ ಹಿಡಿದ ಕೈಗನ್ನಡಿ. ಎಲ್ಲಾ ಭಾಷ್ಯಗಳಂತೆ ಗುರುಪರಂಪರಾ ವಂದನೆ, ಪೂರ್ವಪಕ್ಷ, ಸಿದ್ಧಾಂತ, ಆಕ್ಷೇಪ, ಪರಿಹಾರ– ಈ ಕ್ರಮಗಳೇ ಇಲ್ಲಿಯೂ ಇದ್ದರೂ ಈ ಭಾಷ್ಯವು ಅನೇಕ ರೀತಿಯಲ್ಲಿ ವೈಶಿಷ್ಟ್ಯಪೂರ್ಣವೂ ಅನುಪಮವೂ ಆಗಿದೆ ಎಂದು ಧಾರಾಳವಾಗಿ ಹೇಳಬಹುದು. ಅಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ಗಮನಿಸೋಣ.

ಸಿದ್ಧಾಂತಸ್ಥಾಪನೆಗೆ ಪ್ರಮಾಣಗಳು ಅತ್ಯಗತ್ಯ. ಅವುಗಳಲ್ಲಿ ಶಬ್ದಪ್ರಮಾಣದ (ಆಗಮ) ಆತ್ಯಂತಿಕ ಅನಿವಾರ್ಯತೆಯನ್ನು ಸ್ವಾಮೀಜಿಯವರು ಶ್ರುತಿ ಸ್ಮೃತಿ ವಾಕ್ಯಗಳ ಉದಾಹರಣೆಯೊಡನೆ ಪ್ರತಿಪಾದಿಸುವ ಬಗೆ ಮನೋಜ್ಞವಾಗಿದೆ. ತಿಳಿಯುವ ವಸ್ತು, ತಿಳಿಯಲು ಬೇಕಾದ ಸಾಧನ (ಪ್ರಮಾಣ–ಪ್ರಮೇಯ), ಆ ಮೂಲಕ ವಸ್ತುವಿನ ಗುಣಸ್ವರೂಪ ಸ್ವಭಾವಾದಿಗಳ ಜ್ಞಾನ – ಇವು ಭೌತವಿಜ್ಞಾನಕ್ಕೂ ಮತ್ತು ಆಗಮಗಳಿಗೂ ಸಮಾನವಾದುವು. ಆದರೆ ಭೌತವಿಜ್ಞಾನವನ್ನು ಒಪ್ಪಿದಂತೆ ಆಗಮಪ್ರಾಮಾಣ್ಯವನ್ನು ಜನ ಒಪ್ಪುವುದಿಲ್ಲ. ಇದಕ್ಕೆ ಕಾರಣ ಸಾಧನದಲ್ಲಿನ ಭಿನ್ನತೆ. ಇದನ್ನು ಜನ ಏಕೆ ಗಮನಿಸುವುದಿಲ್ಲ ಎಂದು ವಾದಿಸುವ ಸ್ವಾಮೀಜಿ ಅದಕ್ಕೆ ಒಂದು ಒಳ್ಳೆಯ ದೃಷ್ಟಾಂತವನ್ನು ನೀಡುತ್ತಾರೆ: **'ನ ಹಿ ಕುಶಲೋಽಪಿ ಐಹಿಕವಿಜ್ಞಾನವಿತ್ ಸೂಕ್ಷ್ಮತಮೇನಾಪಿ ತುಲಾಯಂತ್ರೇಣ ಜಲಸ್ಯ ಉಷ್ಣತ್ವಂ ಮಾತುಂ ಶಕ್ನೋತಿ'** – "ಐಹಿಕ ವಿಜ್ಞಾನದಲ್ಲಿ ಅತ್ಯಂತ ಕುಶಲನಾಗಿರುವವನು ಕೂಡ ನೀರಿನ ಉಷ್ಣತೆಯನ್ನು ಅತ್ಯಂತ ಸೂಕ್ಷ್ಮವಾದ ತಕ್ಕಡಿಯಿಂದ ಅಳೆಯಲು ಸಾಧ್ಯವಿಲ್ಲ." ತಿಳಿಯಬೇಕಾದ ವಸ್ತುವಿಗೆ ಅಗತ್ಯವಾದ ಪ್ರಮಾಣವನ್ನು ಅಂದರೆ ಸಾಧನವನ್ನು ಆಶ್ರಯಿಸಬೇಕೆಂದು ಸ್ವಾಮೀಜಿ ಇಲ್ಲಿ ಪ್ರತಿಪಾದಿಸುತ್ತಾರೆ.

ವಿದ್ಯಾ–ಅವಿದ್ಯಾರೂಪವಾದ ಮಾಯಾಶಕ್ತಿಯಿಂದಲೇ ಚಿನ್ಮಾತ್ರವಾದ ಜಡಾತ್ಮಕ ಜಗತ್ತು ಉತ್ಪನ್ನವಾಗಿದೆ. ಅಗ್ನಿಯ ಸುಡುವಿಕೆ ಅಗ್ನಿಗಿಂತ ಹೇಗೆ ಬೇರೆಯಲ್ಲವೋ ಹಾಗೆಯೇ ಪರತತ್ತ್ವಕ್ಕಿಂತ ಅಣುಮಾತ್ರವೂ ಈ ಮಾಯಾಶಕ್ತಿ ಬೇರೆಯಲ್ಲ. ಇದನ್ನು ತಿಳಿದಾಗ ಮನಸ್ಸು ವಿಷಯಸುಖದ ಆಕರ್ಷಣೆಯಿಂದ ವಿಮುಖವಾಗುತ್ತದೆ. ಅಂಥ ಮನಸ್ಸು **'ನಿಸ್ತ್ವಚೀಭೂತ ಪಲಾಂಡುವತ್'** – ಸಿಪ್ಪೆ ತೆಗೆಯುತ್ತಾ ಹೋದ ಈರುಳ್ಳಿಯಂತೆ, ಎಲ್ಲವೂ ಅಳಿದುಹೋಗಿ ಉಳಿದುಕೊಂಡಿರುವ ಏಕೈಕ ಸದ್ವಸ್ತುವಾದ ಪರವಸ್ತುವಿನಲ್ಲಿ ಲೀನವಾಗುತ್ತದೆ.

ಮನಸ್ಸು ಇಂತಹ ಸ್ಥಿತಿ ತಲುಪಲು ಅದು ಶುದ್ಧವಾಗಿರಬೇಕು. ಜ್ಞಾನ, ಕರ್ಮ, ಭಕ್ತಿ, ರಾಜಯೋಗಗಳು ಇದರ ಸಿದ್ಧಿಗೆ ಸಾಧನಗಳು. ಅವುಗಳಲ್ಲಿ ರಾಜಯೋಗವು ಎಲ್ಲಾ ಯೋಗಗಳಿಗೆ ಸಮಾನವಾದುದು ಎಂದು ಶಾಸ್ತ್ರಾಧಾರಸಹಿತವಾಗಿ ಸ್ವಾಮೀಜಿಯವರು ಪ್ರತಿಪಾದಿಸುತ್ತಾರೆ. ಈ ಎಲ್ಲಾ ಅಂಶಗಳೂ ಉಪೋದ್ಘಾತದಲ್ಲಿವೆ. ಅದಕ್ಕೆ ಪೂರ್ವಪಕ್ಷಿಯಾದವನು 'ಮೂಗಿಗಿಂತ ಮೂಗುತಿ ಭಾರ' ಎಂಬಂತೆ ಉಪನಿಷತ್ತಿಗಿಂತ ಅದರ ಉಪೋದ್ಘಾತವೇ ದೊಡ್ಡದಾಯಿತಲ್ಲ ಎಂದು ಆಕ್ಷೇಪವೆತ್ತುತ್ತಾನೆ ಎಂದು ಕಲ್ಪಿಸಿಕೊಂಡು, ಅದರ ಸಾಧುತ್ವವನ್ನು ಸ್ವಾಮೀಜಿ ಮನಸ್ಸಿಗೆ ಮುಟ್ಟುವ ಉದಾಹರಣೆಯಿಂದ ಪ್ರತಿಪಾದಿಸುತ್ತಾರೆ. ರಾಜ ಬರುವ ಮೆರವಣಿಗೆಯಲ್ಲಿ ರಾಜನ ಮುಂದೆ ಮೈಲಿಗಟ್ಟಲೆ ಬರುವ ಕುದುರೆ, ಆನೆ, ಬಿರುದು, ಬಾವಲಿ ಇತ್ಯಾದಿಯಂತೆ ಇದು; ಉಪೋದ್ಘಾತ ದೊಡ್ಡದಾದರೂ ಮೂಲವಸ್ತುವಿನ ವಿಸ್ತಾರವೇ ಆಗಿರುವುದರಿಂದ ಅದು ಅಗತ್ಯವೇ ಆಗಿದೆ ಎಂದು ಸ್ವಾಮೀಜಿ ಪರಿಹಾರ ಹೇಳುತ್ತಾರೆ.

ಇಲ್ಲಿ ಉಪನಿಷತ್ ಪದಕ್ಕೆ ನೀಡಿರುವ ನಿರ್ವಚನ ಅನನ್ಯವಾಗಿದೆ. ಇಂತಹ ವಿಶ್ಲೇಷಣೆ ಬೇರೆಲ್ಲೂ ಕಾಣಬರುವುದಿಲ್ಲ. ಸಂಸಾರವೆಂಬ ಮರುಭೂಮಿಯಲ್ಲಿ ಬೆಂದವನಿಗೆ 'ಉ'ದಕದಂತೆ (ನೀರಿನಂತೆ), ಸಂಸಾರವೆಂಬ ಅಶ್ವತ್ಥವನ್ನು ಕತ್ತರಿಸುವ 'ಪ'ರಶು(ಕೊಡಲಿಯಂತೆ), ಹುಟ್ಟು–ಸಾವುಗಳ ಚಕ್ರದಲ್ಲಿ ಬಂದು ಸುತ್ತಿಸುತ್ತಿ ಬಳಲುತ್ತಿರುವ ಜೀವಿಗೆ 'ನಿ'ಲಯದಂತೆ (ಮನೆ) ಇದ್ದು, ಯಾವ ವಿದ್ಯೆಯು ಅವನ ಭವಬೀಜವನ್ನು 'ಸಾದಯತಿ' – ನಾಶಪಡಿಸುವುದೋ ಅದು 'ಉಪನಿಷತ್' ಎನ್ನುವುದೇ ಸ್ವಾಮಿ ಹರ್ಷಾನಂದಜಿ ಅವರು ನೀಡುವ ವ್ಯಾಖ್ಯಾನ. ಇತರ ಆಚಾರ್ಯರುಗಳು ನೀಡಿರುವ ಉಪ+ನಿ+ಷದ್ ಎಂಬ ವಿವರಣೆಯಷ್ಟೇ ಅಲ್ಲದೆ, ಗುರುವಿನ ಸಮೀಪದಲ್ಲಿ (ಉಪ) ಶಿಷ್ಯನು ಕೆಳಗೆ (ನಿ) ಕುಳಿತುಕೊಳ್ಳುವುದು (ಷದ್) ಎಂಬ ಅರ್ಥವಿವರಣೆಯನ್ನೂ ಸ್ವಾಮೀಜಿ ನೀಡುತ್ತಾರೆ.

ಈ ರೀತಿಯ ಪದನಿರ್ವಚನಗಳ ವೈಶಿಷ್ಟ್ಯ ಈ ಭಾಷ್ಯದಲ್ಲಿ ಅನೇಕವಾಗಿವೆ (**ನರ** – ಪು. ೩೨, **ಅಸುರ** – ಪು.೪೮ ಇತ್ಯಾದಿ). ಈಶಾವಾಸ್ಯ ಉಪನಿಷತ್ತಿನ ಏಳನೇ ಮಂತ್ರದಲ್ಲಿ ಬರುವ **'ವಿಜಾನತಃ'** ಎಂಬ ಪದಕ್ಕೆ ಸ್ವಾಮೀಜಿಯವರು ನೀಡಿರುವ ವಿವರಣೆ ಅಮೋಘವಾಗಿದೆ. ಒಂದು ಸಲ ಸಮಾಧಿ ಹೊಂದಿದವನಿಗೆ ಜಾರುವ ಭಯವಿರುತ್ತದೆ; ಆದರೆ ತನ್ನಿಚ್ಛೆ ಬಂದಂತೆ ಆ ಅವಸ್ಥೆಯನ್ನು ಹೊಂದಿ ಅಲ್ಲಿ ಸ್ಥಿರವಾಗಿ ನಿಲ್ಲಬಲ್ಲವನಿಗೆ ಒಳಗು–ಹೊರಗಿನ ಭೇದವೆಲ್ಲಿ? ಅವನಿಗೆ ಸದಾ ಏಕಾತ್ಮದರ್ಶನವೇ ಆಗುತ್ತಿರುತ್ತದೆ ಎಂದು ಸ್ವಾಮೀಜಿ ಇಲ್ಲಿ ವಿವರಿಸುತ್ತಾರೆ.

ಈ ಭಾಷ್ಯ ಆಪಾತರಮಣೀಯವೂ ಮನೋಹರವೂ ಬೋಧಪ್ರದವೂ ವಿವೇಕಪ್ರದವೂ ಆಗಿದೆ ಎಂದು ಅರಿಯಲು ರುಚಿಮಾತ್ರಕ್ಕೆ ಇಷ್ಟು ವಿವರಣೆ ಸಾಕಾಗುತ್ತದೆ. ಈ ಪುಸ್ತಕ ಕನ್ನಡ ಲಿಪಿಯಲ್ಲಿದೆ. ಭಾಷ್ಯ, ಶ್ಲೋಕ – ಎಲ್ಲಕ್ಕೂ ಸರಳವಾದ ಕನ್ನಡದಲ್ಲಿ ಅರ್ಥವಿವರಣೆಯೂ ಇದೆ. ಇದರಿಂದ ಉಂಟಾಗುವ ವಿವೇಕ ಸುಖ ಆನಂದಗಳನ್ನು ಸಾಧಕರು ಈ ಗ್ರಂಥವನ್ನು ಅಧ್ಯಯನ ಮಾಡಿಯೇ ಅನುಭವಿಸಬೇಕು. ✦